


# ಚಕ್ರ

ಅವರು ನನ್ನೆದುರು ವಾರ್ಡಿನಲಿ
ಕೂತು ದಿನಗಳ ಎಣಿಸುತ್ತಿದ್ದಾರೆ
ಇಂದು ಷಷ್ಟಿ, ನಾಡಿದ್ದು ಏಕಾದಶಿ
ಮತ್ತು ಅದರಾಚೆಗೆ
ಹುಣ್ಣಿಮೆ ಅಥವಾ ಅಮವಾಸ್ಯೆ

ನಾನು ಸುಕ್ಕುಗಟ್ಟಿದ ಅವರ
ಕೈಗಳನ್ನು ನೋಡುತ್ತೇನೆ
ಅವು ನರಗಳ ಆಚೀಚೆ
ಹೊರಳಿಸಿಕೊಳ್ಳುತ್ತ
ಸಣ್ಣಗೆ ನಡುಗುತ್ತಿರುತ್ತವೆ...
ಚುಚ್ಚಿದ ಸಲೈನ್‌ನ ನಳಿಕೆಯಲಿ
ಒಂದೊಂದು ಹನಿ ಹೋದಂತೆಲ್ಲ
ಅವರು ನಿಧಾನದಲಿ ಕೇಳುತ್ತಾರೆ
ಬಾಬ್ರಿ ಮಸೀದಿ ತೀರ್ಪು ಬಂತೆ?
ರಾಮ ಲಲ್ಲಾನಿಗೆ ಮಂದಿರ ಸಿಕ್ಕಿತೆ?
ಕೊರೊನಾದ ವಿಚಾರ ಬಿಟ್ಟರೆ
ಮತ್ತೇನು ಗೊತ್ತಾಗುವುದೆ ಇಲ್ಲ.
ನಾನು ತಲೆಯಾಡಿಸುತ್ತೇನೆ.

ಅವರು ಆಕಾಶದೆಡೆಗೆ ಕತ್ತು ತಿರುಗಿಸಿ
ಹಳೆಯ ಕತೆಗಳ ಹೇಳುತ್ತಾರೆ–
ಕೈ ಬಿಟ್ಟು ಹೋದ ಗದ್ದೆ, ತೋಟಗಳು
ಮೋಸ ಮಾಡಿದ ಅಣ್ಣತಮ್ಮಂದಿರು
ನೋಡದೆ ಹೋದ ಮಕ್ಕಳು
ಅಕ್ಕರೆಯ ಹೆಂಡತಿ ಕುರಿತು ಏನೇನೋ ಹೇಳಿ
ಸುಮ್ಮಗೆ ಅವರ ಏದುಬ್ಬಸಪಡುವ ಕವಾಟಗಳ
ನೋಡಿ ಈಗ ಇವೆಲ್ಲ ಬೇಕೆ? ಎನ್ನುತ್ತೇನೆ
ಎಳೆದೆಳೆದು ಬಿಡುವ ಉಸಿರ ನಡುವಿನಲ್ಲಿ

ಈಗಲ್ಲದೆ ಮತ್ಯಾವಾಗ
ಎನ್ನುವಂತೆ ಮುಖ ನೋಡುತ್ತಾರೆ.
'ಸುಮ್ಮನಿರಿ ಸದ್ಯಕ್ಕೆ' ಗದರುತ್ತೇನೆ
'ಸುಮ್ಮನಾಗುವುದಕ್ಕೆ ಈ ಎಲ್ಲ'
ಕಣ್ಣು ಮಿಟುಕಿಸಿ ನಗುತ್ತಾರೆ
ನನಗೆ ಗಂಟಲು ಕಟ್ಟತೊಡಗುತ್ತದೆ

● **ದೀಪ್ತಿ ಭದ್ರಾವತಿ**

ಕಲೆ: ವಾಗೀಶ ಹೆಗಡೆ